ಆ) ಈ ಅಧಿಕಾರವನ್ನು ಉಪಯೋಗಿಸಿಕೊಂಡು 14.05.1998 ರಂದು ಸರ್ಕಾರದ ಸಮ್ಮುಖದಲ್ಲಿ 53 ಕಾರ್ಮಿಕರ ಪರವಾಗಿ ಆಗಿರುವ ಒಪ್ಪಂದ ಪೂರ್ಣವಾಗಿ ಜಾರಿ ಆಗುವಂತೆ ಮಾಡಲು ಸರ್ಕಾರಕ್ಕೆ ಸಾಧ್ಯವಾಗುವುದೇ;

ಇ) ಆಗುವುದಾದಲ್ಲಿ, ಯಾವಾಗ ಮಾಡಲಾಗುವುದು;

ಈ) ಸದರಿ ತೀರ್ಪಿನ ಪ್ರತಿ ಒದಗಿಸುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಕಾರ್ಖಾನೆಯ ಆಡಳಿತ ಮತ್ತು ಕಾರ್ಮಿಕರಲ್ಲಿ ಆಗಿರುವ ಒಪ್ಪಂದಗಳ ಹೊಂದಾಣಿಕೆ ಮತ್ತು ಅವುಗಳ ಅನುಷ್ಟಾನದ ಬಗ್ಗೆ ನಿಯಂತ್ರಣವಿಟ್ಟು ಕೊಳ್ಳಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 29, 29 (ಜಿ), 53(ಎ) ಮತ್ತು 54ರಂತಹ ಕೆಲವು ಮುಖ್ಯ ಅಧಿಕಾರಗಳು ಸರ್ಕಾರಕ್ಕೆ ಇರುವುದರಿಂದ ಸಕ್ಕರೆ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ತೀರ್ಮಾನಗಳ ಜಾರಿ ಮಾಡುವುದನ್ನು ಕಡೆಗಣಿಸುವಂತಿಲ್ಲ. ಆದಾಗ್ಯೂ ಈ ಬಗ್ಗೆ ಸಂವಿಧಾನದ ಆರ್ಟಿಕಲ್ 14 ರಡಿಯಲ್ಲಿ ಪರೀಕ್ಷೆಗೆ ಒಳಪಡಿಸುವ ಅವಶ್ಯಕತೆ ಇದೆ ಎಂದು ವ್ಯಾಖ್ಯಾನಿಸಿದೆ.

ಆ) ಗೌರವ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ. 13524/99 ರಲ್ಲಿ ದಿನಾಂಕ 25.2.2003ರಲ್ಲಿ ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವಲ್ಲಿ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡಲು ಸಕ್ಕರೆ ನಿರ್ದೇಶಕರು ದಿನಾಂಕ 25.4.2003 ರಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿರುತ್ತಾರೆ. ಆದರೆ ಈ ತೀರ್ಪಿನ ಬಗ್ಗೆ ಆಡಳಿತ ಮಂಡಳಿಯು ದಿನಾಂಕ 18.3.2003 ರಂದು ನಡೆದ ಸಭೆಯಲ್ಲಿ ಮೇಲಿನ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ನಿರ್ಣಯಿಸಿದ್ದು, ಅದರಂತೆ ಕಾರ್ಖಾನೆಯು ಗೌರವ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. (ಸಿವಿಲ್) ನಂ. 9443/2003 ರಲ್ಲಿ ಸಲ್ಲಿಸಿರುತ್ತಾರೆ.

ಇ) ಈ) ಗೌರವ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಎಸ್ಎಲ್ಪಿ ತೀರ್ಮಾನದ ಪ್ರಕಾರ ಕಾರ್ಖಾನೆಯು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರ ಒಪ್ಪಂದ

4688 (5428) : ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಇದರ ನೊಂದ 124 ಕಾರ್ಮಿಕರ ಪೈಕಿ 35 ಕಾರ್ಮಿಕರ ಪರವಾಗಿ 14.05.1998ರಂದು ಆಗಿರುವಂತಹ ಒಪ್ಪಂದ ಉಬಯ ಸದನಗಳಲ್ಲಿ ಸರ್ಕಾರ ಕೊಟ್ಟಂತಹ ಆಶ್ವಾಸನೆಗಳ ಜಾರಿಮಾಡಲಾಗುವುದೆ;

ಆ) ಹಾಗಿದ್ದಲ್ಲಿ, ಇಂತಹ ಒಪ್ಪಂದವನ್ನು ಮತ್ತು ನಿರ್ದೇಶನವನ್ನು ಅಸಮ್ಮತಿಸಿ ಸರ್ವಾನುಮತದ ನಿರ್ಣಯವನ್ನು ಸದರಿ ಕಾರ್ಖಾನೆಯ ಆಡಳಿತ ಮಂಡಳಿಯವರು ದಿನಾಂಕ 13.07.19998ರಂದು ಮಾಡಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಇದು ಉಭಯ ಸದನಗಳ ಶಾಸಕಾಂಗವನ್ನು ಸರ್ಕಾರವನ್ನು ಮತ್ತು ಜನ ಪ್ರತಿನಿಧಿಸಿಗಳನ್ನು ಕಡೆಗಣಿಸಿದಂತೆ ಆಗುವುದಿಲ್ಲವೆ;

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಸದರಿ ವಿಷಯದ ಮೇಲೆ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಎಸ್.ಎಲ್.ಪಿ. (ಸಿಎಲ್) ನಂ.9643/2003 ದಾಖಲಿಸಲಾಗಿರುತ್ತದೆ. ಈ ವಿಷಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ಇರುವುದರಿಂದ ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ನೀಡುವ ಆದೇಶವನ್ನು ಪಾಲಿಸಬೇಕಾಗಿರುತ್ತದೆ.

ಆ) ಹೌದು.

ಇ) ವಿಷಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ಇರುವುದರಿಂದ, ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ನೀಡುವ ಆದೇಸವನ್ನು ಪಾಲಿಸಬೇಕಾಗಿರುತ್ತದೆ.

ಈ) ಉದ್ಭವಿಸುವುದಿಲ್ಲ.

ಅಗರಬತ್ತಿ ವರ್ಕ್ಸ್ ಅಂಡ್ ಅದರ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

4690 (5192) : ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಗರಬತ್ತಿ ವರ್ಕ್ಸ್ ಅಂಡ್ ಗೃಹನಿರ್ಮಾಣ ಸಹಕಾರ ಸಂಘ ನಿಯಮಿತ ಸಂಘದ ಸ್ಥಿರಾಸ್ತಿ ಎಷ್ಟು ವಿವರ ನೀಡುವುದು, ಎಷ್ಟು ಜನ ನೈಜ ಸದಸ್ಯರಿದ್ದಾರೆ: ಈ ಬಗ್ಗೆ ವಿಚಾರಣೆ ಏನಾದರೂ ಮಾಡಲಾಗಿದೆಯೇ?

ಆ) ಈ ಸಂಘದ ಅಧ್ಯಕ್ಷರು ಸಂಘದ ಹೆಸರಿನಲ್ಲಿ ಜಮೀನನ್ನು ಕರಾರು ಮಾಡಿ ನಂತರ ನೈಯಕ್ತಿಕವಾಗಿ ಬಡಾವಣೆ ನಿರ್ಮಾಣ ಮಾಡಿ ಲಾಭ ಗಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) 15 ವರ್ಷಗಳಿಗೆ ಮೇಲ್ಪಟ್ಟು ಸಂಘದಿಂದ ಸದಸ್ಯರ ಉದ್ದೇಶ ಸಾಧನೆ ಆಗದಿರುವುದನ್ನು ಗಮನಿಸಿ ಸಂಘವನ್ನು ಸಮಾಪನೆಗೊಳಿಸಲು ಆದೇಶ ಮಾಡಿದ್ದು ನಂತರ ಹಿಂದೆ ಪಡೆಯಲು ಕಾರಣವೇನು?

ಈ) ಈ ಸಂಘವನ್ನು ಸಮಾಪನಗೊಳಿಸಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಹೆಚ್. ವಿಶ್ವನಾಥ್ (ಸಹಕರ ಸಚಿವರು)

ಅ) ಅಗರ್ ಬತ್ತಿ ವರ್ಕ್ಸ್ ಅಂಡ್ ಅದರ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಚಿಕ್ಕಬೆಟ್ಟಹಳ್ಳಿ ಗ್ರಾಮದಲ್ಲಿ 4.16 1/2 ಎಕರೆ ಜಮೀನು ಇರುತ್ತದೆ. ಸಂಘದಲ್ಲಿ 84 ಜನ ಸದಸ್ಯರಿದ್ದು ವಿಚಾರಣೆಯಲ್ಲಿ ನೈಜತೆ ಬಗ್ಗೆ ನೋಟೀಸ್ ನೀಡಿದ್ದು 60 ಜನರಿಗೆ ನೋಟೀಸು ಜಾರಿಯಾಗದೆ ವಾಪಸ್ಸು ಬಂದಿದ್ದು ಉಳಿದ ಸದಸ್ಯರು ತಮ್ಮ ನೈಜ ಸದಸ್ಯತ್ವವನ್ನು ಸಾಬೀತು ಪಡಿಸಲು ಸಮರ್ಥಿಸುವ ಪೂರಕ ದಾಖಲೆಗಳನ್ನು ಒದಗಿಸಿಲ್ಲ.

ಆ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 65 ರನ್ವಯ ಪರಿವೀಕ್ಷಣಾ ವರದಿಯಂತೆ ಸಂಘದ ಅಧ್ಯಕ್ಷರು ಸಂಘದ ಹೆಸರಿನಲ್ಲಿ ವೈಯಕ್ತಿಕವಾಗಿ ವ್ಯವಹಾರ ನಡೆಸಿ ಬಡಾವಣೆ ನಿರ್ಮಾಣ ಮಾಡಿರುವುದು ಕಂಡು ಬಂದಿದ್ದು, ಸಂಘವು ಬಡಾವಣೆ ನಿರ್ಮಿಸಲಿರುವ ಜಮೀನು ನ್ಯಾಯಾಲಯದಲ್ಲಿ ತಕರಾರಿನಲ್ಲಿರುವ ಕಾರಣ ಅಧ್ಯಕ್ಷರ ವಿರುದ್ಧ ಕ್ರಮ ಜರುಗಿಸಿಲ್ಲ. ಈ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.